(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸವೂ ಇದೇ ರೀತಿಯಲ್ಲಿ ಸಭೆಯ ಮುಂದೆ ಮಂಡಿಸಿದ್ದೇನೆಂದು ಹೇಳಿದರು. ಆದರೆ ಉತ್ತರಗಳನ್ನು ಯಾರ ಟೇಬಲ್ ಮೇಲೂ ಇಟ್ಟಿರಲಿಲ್ಲ, ಈಗಲೂ ಇಟ್ಟಿಲ್ಲ.

ಅಧ್ಯಕ್ಷರು : ನಿಮಗೆ ತೊಂದರೆಯಾಗುತ್ತದೆಂದು ಕೊಟ್ಟಿರಲಿಲ್ಲ, ಈಗ ಕೊಡುತ್ತಾರೆ.

4). ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ,

1. ಪಶ್ಚಿಮ ಘಟ್ಟವು ಹರಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಸ್ಯ ಸಂಪತ್ತು ಪ್ರಾಣಿ ಸಂಪತ್ತಿನ ಜೀವವೈವಿಧ್ಯವನ್ನು ಸಂರಕ್ಷಿಸುವ ಬಗ್ಗೆ ಕೆ.ಪ್ರಭಾಕರ ಬಂಗೇರ ಅವರು ಸಹಿ ಮಾಡಿರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

2. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಯಿಂದಾಗಿ ಜಲಮರು ಪೂರಣ ಯೋಜನೆಗಳಿಗೆ ಆದ್ಯತೆ ನೀಡುವ ಬಗ್ಗೆ ಕೆ.ಪ್ರಭಾಕರ ಬಂಗೇರ ಅವರು ಸಹಿ ಮಾಡಿರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು : 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪಕಾಲಾವಧಿ ಚರ್ಚೆ.

ಅಧ್ಯಕ್ಷರ ಅನುಜ್ಞೆಯ ಮೇರೆಗೆ

ವಿಷಯ : ಶೂನ್ಯ ವೇಳೆಯ ಮಹತ್ವದ ಬಗ್ಗೆ ಪ್ರಸ್ತಾಪ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈಗ ಶೂನ್ಯ ವೇಳೆ...

ಅಧ್ಯಕ್ಷರು : ಈಗ ಶೂನ್ಯ ವೇಳೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳು ಏನಿದೆ ಸದಸ್ಯರುಗಳು ಯಾರ್ಯಾರು ಕೊಟ್ಟಿದ್ದಿರೋ, ಒಂದಕ್ಕೂ ಉತ್ತರ ನಮಗೆ ಬಂದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ಪ್ರತಿ ದಿವಸವೂ ಬರುತ್ತಲೇ ಇದ್ದೇನಲ್ಲಾ...

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾವು ಕೊಡುವಂತಹ ವಿಷಯಗಳಿಗೆ ಯಾರು ಪರಿಹಾರವನ್ನು ಕೊಡಬೇಕು ಹೇಳಿ ? ನಾವು ಶೂನ್ಯ ವೇಳೆಯಲ್ಲಿ ಕೇಳುವಂತಹ ಅಗತ್ಯ ಏನಿದೆ ? ನಾವು ಕೇಳುವಂತಹ ಪ್ರಶ್ನೆಗೆ ತತ್-ತಕ್ಷಣವೇ ಉತ್ತರ ಕೊಡಬೇಕು. ಅದಕ್ಕೆ ಸರ್ಕಾರದವರು ತತ್-ತಕ್ಷಣವೇ ಗಮನ ಕೊಡಬೇಕೆಂದು ಪ್ರಶ್ನೆಯನ್ನು 5-6 ದಿವಸಗಳ ಹಿಂದೆಯೇ ಬರೆದು ಕೊಟ್ಟರೆ ಇವರು ಉತ್ತರವನ್ನು ಕೊಡಲಿಲ್ಲವೆಂದರೆ ಇದರ ಅರ್ಥವೇನು ? ಸರ್ಕಾರ ನಡೆಯುವುದಿಲ್ಲವೇ ? ನಾವು ಯಾವ ಕಾರಣಕ್ಕೋಸ್ಕರ ಬರೆದು ಕೊಡಬೇಕು ? ನಮಗೆ ಗೌರವವಿಲ್ಲವೆಂದರೆ, ನಾವು ಇಲ್ಲಿ ಕುಳಿತುಕೊಳ್ಳುವಂತಹ ಅವಶ್ಯಕತೆ ಇಲ್ಲ.